ಸುಲೋಚನಾ ಮತ್ತು ಭಾಮಾ. ತಾಲೂಕು ಕೇಂದ್ರ ಅನಿಸಿಕೊಂಡ ಒಂದೂರಿನಲ್ಲಿ, ಒಂದು ಕಾಲದಲ್ಲಿ, ಸಹವಾಸಿಗಳಾಗಿದ್ದವರು. ಊರಿನ ನದಿಗೆ ಸಂಪರ್ಕ ಕಲ್ಪಿಸುವ ಸಣ್ಣ ರಸ್ತೆಯ ಎಡಬದಿಯಲ್ಲಿ ಉದ್ದುದ್ದಕ್ಕೂ ಓಣಿಗಳಂತಿದ್ದ ಕಿರುದಾರಿಗಳ ಎದುರುಬದುರು ಸಾಲಾಗಿದ್ದ ಹತ್ತೆಂಟು ಮನೆಗಳು. ಕೆಳ ಮಧ್ಯಮವರ್ಗಕ್ಕೆ ಸೇರಿದವರು ಕೈಗೆಟುಕುವಂತಿದ್ದ ಬಾಡಿಗೆಗೆ ಬದುಕು ಕಟ್ಟಿಕೊಂಡಂತವು. ಎರಡೂ ಬದಿಯ ಮನೆಗಳ ನಡುವಿನ ಕಿರು ಹಾದಿ ಎಷ್ಟು ಇಕ್ಕಟ್ಟು ಅಂದರೆ ಒಬ್ಬರ ಮನೆಯೆದುರು ಹಾಕಿದ ರಂಗೋಲಿ ಎದುರಿನ ಇನ್ನೊಬ್ಬರ ಮನೆಗೆ ತಾಕುವಂತಿದ್ದ ಜಾಗ. ಈ ಓಣಿಗೆ ತಿರುಗುವಲ್ಲಿ ಮೊದಲ ಎದುರುಬದುರು ಮನೆಗಳಲ್ಲಿದ್ದವರೇ ಈ ಇಬ್ಬರು. ಹೈಸ್ಕೂಲಿಗೆ ಹೋಗುತ್ತಿದ್ದ ಹುಡುಗಿಯರು. ಸುಲೋಚನಾ ಭಾಮಾನಿಗಿಂತಾ ಎರಡು ವರ್ಷ ದೊಡ್ಡವಳು. ಅವಳು ಹೈಸ್ಕೂಲಿನ ಕೊನೆಯ ವರ್ಷದಲ್ಲಿದ್ದರೆ ಭಾಮಾ ಮೊದಲ ವರ್ಷ. ಸಹಜವಾಗಿ ಇಬ್ಬರಲ್ಲಿ ಸ್ನೇಹ ಇತ್ತು. ಒಟ್ಟೊಟ್ಟಿಗೆ ಸ್ಕೂಲಿಗೆ ಹೋಗುವ, ಬರುವ ಪದ್ಧತಿ ಇತ್ತು. ಸೋಮಸೋಮವಾರ ಹತ್ತಿರದ ಪುರಾಣಪ್ರಸಿದ್ಧ ಈಶ್ವರ ದೇವಸ್ಥಾನಕ್ಕೆ ಹೋಗುವುದೂ. ಭಾಮಾ ಕ್ರಮೇಣ ಅವಳ ಸಂಪರ್ಕ ಕಡಿದುಕೊಂಡಿದ್ದಕ್ಕೆ ಅಥವಾ ಅವಳು ಇವಳನ್ನು ದೂರ ಮಾಡಿಕೊಂಡಿದ್ದಕ್ಕೆ ಒಂದು ಕಾರಣ ಇತ್ತು. ಲಜ್ಜೆಗೇಡಿನ ಕಾರಣ. ಸುಲೋಚನಾ ನೋಡಿದರೆ ತೀರಾ ಕರ್ಮಠ ಬ್ರಾಹ್ಮಣರ ಮನೆಯಲ್ಲಿ ಹುಟ್ಟಿ ಬೆಳೆದವಳು. ತಿಂಗಳ ಮೂರು ದಿನ ಯಾರನ್ನೂ ಮುಟ್ಟಿಸಿಕೊಳ್ಳದೆ, ಮೈಗೆ ನೀರು ಸೋಕಿಸದೆ, ಮೂಲೆ ಹಿಡಿದು ಕೂರುವ ಸಂಪ್ರದಾಯ ಕೊನೆಯುಸಿರೆಳೆಯುವ ಕಾಲ ಹತ್ತಿರವಾಗಿದ್ದರೂ, ಮೊದಲಿನ ವಿಪರೀತದ ಕಟ್ಟುನಿಟ್ಟು ಕಡಿಮೆಯಾಗುತ್ತಾ ಬಂದಿದ್ದರೂ ಸುಲೋಚನನ ಮನೆಯಲ್ಲಿ ಈ ವಿಷಯವಾಗಿ ಬಹಳ ಬಿಗು ಇತ್ತು. ಅದಕ್ಕೆ ಕಾರಣ ಸುಲೋಚನನ ಅಜ್ಜಿ. ಮಡಿ ಹೆಂಗಸು. ಮೊಮ್ಮಗಳ ಸ್ನೇಹಿತೆಯರು ಮನೆಗೆ ಬರುವುದು ಅಜ್ಜಿಗೆ ಹಿತವಾದ ಸಂಗತಿಯೇನಲ್ಲ. ಯಾರ್‍ಯಾರು ಮುಟ್ಟಾಗಿರುತ್ತಾರೋ, ಮೈಲಿಗೆಯವರನ್ನು ಮುಟ್ಟಿರುತ್ತಾರೋ ಎನ್ನುವ ಸಂದೇಹ. ಅವರ ಮನೆಯಲ್ಲೇನಾದರೂ ಅಪರೂಪಕ್ಕೆ ತಿಂಡಿಗಿಟ್ಟದರೆ ತಿಂದ ತಟ್ಟೆಯನ್ನು, ಕುಡಿದ ಎಂಜಲು ಲೋಟವನ್ನು ಉಪಯೋಗಿಸಿದವರೇ ತೊಳೆದು ಹಿತ್ತಿಲ ಬಟ್ಟೆ ಒಗೆಯುವ ಕಲ್ಲಿನ ಮೇಲೆ ಕವುಚಿಡಬೇಕು. ನಂತರ ಅಜ್ಜಿ ಅದಕ್ಕೆ ಮಡಿ ನೀರು ಚಿಮುಕಿಸಿ ಒಳಗೆ ತೆಗೆದಿಡಬೇಕು. ಈ ಕಾರಣದಿಂದ ಅವಳ ಮನೆಗೆ ಅವಳ ಗೆಳತಿಯರು ಅನ್ನುವ ವಿಶ್ವಾಸದಿಂದ ಹೋಗುತ್ತಿದ್ದವರು ಕಮ್ಮಿ. 'ಸುಲೋಚನಳ ಅಜ್ಜಿ ಒಂದು ತಂಬಿಗೆಯಲ್ಲಿ ಗೋಮಯ ಕದರಿಟ್ಟು ಬಂದವರು ಕೂತ ಜಾಗಕ್ಕೆ, ಓಡಾಡಿದ ಜಾಗಕ್ಕೆ ಪ್ರೋಕ್ಷಣೆ ಮಾಡುತ್ತಾರೆ' ಎನ್ನುವ ಮಾತು ಹುಡುಗಿಯರ ನಡುವೆ ಚಾಲ್ತಿಯಲ್ಲಿತ್ತು ಮತ್ತು ಇದು ತೀರಾ ಸುಳ್ಳೂ ಆಗಿರಲಿಲ್ಲ. ಸುಲೋಚನಳ ಅಮ್ಮ ಬಾಯಿ ಸತ್ತ ಹೆಂಗಸು. ಅತ್ತೆಯ ಯಜಮಾನಿಕೆಯೆದುರು ಅವರದ್ದೇನೂ ನಡೆಯುತ್ತಿರಲಿಲ್ಲ ಅನ್ನುವುದಕ್ಕಿಂತಾ ಆ ಮನೆವರೆಲ್ಲಾ ಇಂಥ ಆಚರಣೆಗಳ ಬಗ್ಗೆ ತೀರಾ ನಂಬಿಕೆಯುಳ್ಳ ಕಟ್ಟಾ ಸಂಪ್ರದಾಯಸ್ಥರಾಗಿದ್ದರು. ಎಲ್ಲಾ ಹಬ್ಬ ಹರಿದಿನಗಳು, ವ್ರತಾಚರಣೆಗಳು, ಏಕಾದಶಿಯ ನಿಟ್ಟುಪವಾಸ, ದ್ವಾದಶಿಯ ಪಾರಣೆ ಆ ಮನೆಯಲ್ಲಿ ಚ್ಯುತಿ ಇಲ್ಲದೆ ನಡೆಯುತ್ತಿತ್ತು. ಅಲ್ಲಿನ ಮನೆಗಳಲ್ಲಿ, ಹಾಗೆನ್ನುವುದಕ್ಕಿಂತಾ ಆ ಕಾಲದ ಮನೆಗಳಲ್ಲಿ ಕಕ್ಕಸುಮನೆ ಅನ್ನುವುದು ಮನೆಯ ಒಳಗೆ ಸೇರಿಕೊಂಡಿರುವಂತೆ ಇರುತ್ತಿರಲಿಲ್ಲ. ಮನೆಯ ಹಿಂಭಾಗದ ಹಿತ್ತಿಲಲ್ಲೋ, ಬದಿಯ ಜಾಗದಲ್ಲೋ ಅದಕ್ಕೊಂದು ಪ್ರತ್ಯೇಕದ ಸ್ಥಳ. ಶೌಚಕ್ಕೆ ಉಪಯೋಗಿಸಲಿಕ್ಕೆಂದೇ ಮೀಸಲಿಟ್ಟಿರುತ್ತಿದ್ದ ತಂಬಿಗೆ. ಅದಕ್ಕೆ ಯಾವತ್ತೂ ಮನೆಯೊಳಗೆ ಪ್ರವೇಶವಿಲ್ಲ. ಅದರಲ್ಲಿ ತುಂಬಿಸಿ ತೆಗೆದುಕೊಂಡು ಹೋದ ಲಿಮಿಟ್ಟಿನ ನೀರಿನಿಂದ ಅದು ಹೇಗೆ ಶುದ್ಧೀಕರಣ ನಡೆಯುತ್ತಿತ್ತೋ ಕಾಲ ಮರೆಸಿಬಿಟ್ಟಿದೆ ಭಾಮಾನಿಗೆ. ಮನೆಯಲ್ಲಿ ಎಷ್ಟೇ ಜನ ಇರಲಿ, ಮನೆಗೊಂದೇ ಕಕ್ಕಸು. ನಾಲ್ಕಾರು ಮನೆಗಳಿಗೆ ಒಂದೇ ಇರುತ್ತಿದ್ದ ವಸತಿಸಮುಚ್ಚಯಗಳೂ ಅಪರೂಪವೇನಾಗಿರಲಿಲ್ಲ. ಸುಲೋಚನಳ ಮನೆಯಲ್ಲಿ ಮೂರೂ ಮತ್ತೊಂದು ಜನ. ಹಾಗಾಗಿ ಅವರ ಮನೆಯವರಿಗೆ ಇದು ದೊಡ್ಡ ಸಮಸ್ಯೆ ಅನಿಸುತ್ತಿರಲಿಲ್ಲ, ಭಾಮಾನ ಮನೆಯವರಂತೆ. ತೀರಾ ಅರ್ಜೆಂಟಿನಿಂದಾಗಿ ಬಾಗಿಲು ಬಡಿಯುತ್ತಾ, ಒಳಗಿರುವವರನ್ನು ಬೇಗ ಬರುವಂತೆ ಗೋಗರೆಯುತ್ತಿದ್ದಿದ್ದು, ಒತ್ತಡ ಮಿತಿ ಮೀರಿದಾಗ ತಡೆದುಕೊಳ್ಳಲಾಗದೆ ಉಟ್ಟ ಬಟ್ಟೆಯಲ್ಲೇ ಕ್ರಿಯೆ ಮುಗಿದು ಹೋಗಿ ಅಮ್ಮನಿಂದ ಬೈಗುಳ